**ಚಾಸಾ-12 ಪ್ರಾಸಾ-2**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಸಿಸಿ. 23103/2012**

| | |
|---|---|
| **ಸಾಕ್ಷಿದಾರರ ಹೆಸರು** | ರಾಘವೇಂದ್ರ.ಎಂ. |
| **ತಂದೆಯ ಹೆಸರು** | ಲೇಟ್. ನಾರಾಯಣ.ಎಂ., |
| **ವಯಸ್ಸು** | 48 ವರ್ಷ |
| **ಉದ್ಯೋಗ** | ಪೊಲೀಸ್ ನಿರೀಕ್ಷಕರು, ಮಂಗಳೂರು. |
| **ವಾಸ** | ಮಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 10.06.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 2010 ರಿಂದ 2012 ರವರೆಗೆ ಯಶವಂರಪುರ ಪೊಲೀಸ್ ಠಾಣೆಯಲ್ಲಿ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದ ಕಡತವನ್ನು ನಾನು ಚಾಸಾ-11 ರವರಿಂದ ಪಡೆದು ಕೊಂಡು ತನಿಖೆಯನ್ನು ಮುಂದುವರೆಯಿಸಿರುತ್ತೇನೆ. ದಿ.10.01.2011 ರಂದು ಚಾಸಾ-4 ಮತ್ತು 6 ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಕಡಿರುತ್ತೇನೆ. ನಂತರ ದಿ.11.01.2012 ರಂದು ಎರಡನೇ ಆರೋಪಿ ಶ್ರೀಮತಿ. ಶೈಜಾ ಮೈಕಲ್ ರವರು ಮಾನ್ಯ ಉಚ್ಚ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದು, ಸದರಿ ಪ್ರತಿಯನ್ನು ನನ್ನ ಮುಂದೆ ಹಾಜರುಪಡಿಸಿದ್ದು, ನಾನು ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿ.25.08.2012 ರಂದು ಯಶವಂತಪುರ ಮಣಪುರಂ ಫೈನಾನ್ಸ್ ಲಿ. ಕೆಲವೊಂದು ದಾಖಲೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ.07.09.2012ರಂದು ಈ ಪ್ರಕರಣದ ತನಿಖೆಯನ್ನು ಮುಕ್ತಾಯ ಗೊಳಿಸಿ ಆರೋಪಿತರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ದಿ.09.12.2009 ರಂದು ರಮೇಶ್.ಆರ್. ಎನ್ನುವವರು ಮಣಪುರಂ ಫೈನಾನ್ಸ್ ನಲ್ಲಿ ಚಿನ್ನ ವನ್ನು ಅಡಮಾನ ಮಾಡಿದ ಬಗ್ಗೆ ರಸೀದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ.2 ಎಂದು ಗುರುತಿಸಲಾಯಿತು. ರಮೇಶ್ ರವರು ಹಣ ಸಂದಾಯ ಮಾಡಿದ ಬಗ್ಗೆ ಮಣಪುರಂ ಫೈನಾನ್ಸ್ ರವರು

ನೀಡಿರುವ ಹಣ ಸಂದಾಯ ರಸೀದಿಯನ್ನು ನಿಪಿ.3 ಎಂದು, ಮಣಪುರಂ ಫೈನಾನ್ಸ್ ಲಿ. ರವರು ನೀಡಿರುವ ಗೋಲ್ಡ್ ಅಪ್ರೆಸೈಡ್ ರಿಪೋರ್ಟ್ ಗಳನ್ನು ನಿಪಿ.4 ಮತ್ತು 5 ಎಂದು, ಮಣಪುರಂ ಗ್ರೂಪ್ ಆಫ್ ಕಂಪನಿಯವರು ನೀಡಿರುವ ಎರಡನೇ ಆರೋಪಿಯ ದೃಡೀಕೃತ ಪಾರ್ಸನಲ್ ಡಾಟಾ ಫಾರಂ ನ್ನು ನಿಪಿ.6 ಎಂದು, ಮಣಪುರಂ ಫೈನಾನ್ಸ್ ಲಿ. ರವರು ಎರಡನೇಆರೋಪಿಗೆ ನೀಡಿರುವ ನೇಮಕಾತಿ ಪತ್ರದ ದೃಡೀಕೃತ ಪ್ರತಿಯನ್ನು ನಿಪಿ.7 ಎಂದು, ಎರಡನೇ ಆರೋಪಿಯ ದೃಡೀಕೃತ ಚುನಾವಣಾ ಗುರುತಿಸಿದ ಚೀಟಿಯನ್ನು ನಿಪಿ.8 ಎಂದು, ದಿ.27.05.2010 ರ ಗೋಲ್ಡ್ ಗೋಲ್ಡ್ ಅಪ್ರೆಸೈಡ್ ರಿಪೋರ್ಟ್ ಗಳ ನ್ನು ನಿಪಿ.9 ಮತ್ತು 10 ಎಂದು, ಮಣಪುರಂ ಫೈನಾನ್ಸ್ ಲಿ. ರವರು ಒಂದನೇ ಆರೋಪಿಗೆ ನೀಡಿರುವ ನೇಮಕಾತಿ ಪತ್ರದ ದೃಡೀಕೃತ ಪ್ರತಿಯನ್ನು ನಿಪಿ.11 ಎಂದು, ಒಂದನೇ ಆರೋಪಿಯ ದೃಡೀಕೃತ ಪಾರ್ಸನಲ್ ಡಾಟಾ ಫಾರಂ ನ್ನು ನಿಪಿ.12 ಎಂದು, ಒಂದನೇ ಆರೋಪಿಯ ದೃಡೀಕೃತ ಚುನಾವಣಾ ಗುರುತಿಸಿದ ಚೀಟಿಯನ್ನು ನಿಪಿ.13 ಎಂದು, ದಿ.15.12.2009 ರಂದು ರಾಜ್ ಕುಮಾರ್ ಎಸ್. ಎನ್ನುವವರು ಮಣಪುರಂ ಫೈನಾನ್ಸ್ ನಲ್ಲಿ ಚಿನ್ನವನ್ನು ಅಡಮಾನ ಮಾಡಿದ ಬಗ್ಗೆ ರಸೀದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ.14 ಎಂದು, ರಾಜ್ ಕುಮಾರರ್ ರವರು ಹಣ ಸಂದಾಯ ಮಾಡಿದ ಬಗ್ಗೆ ಮಣಪುರಂ ಫೈನಾನ್ಸ್ ರವರು ನೀಡಿರುವ ಹಣ ಸಂದಾಯ ರಸೀದಿಯನ್ನು ನಿಪಿ.15 ಎಂದು, ರಾಜ್ ಕುಮಾರ್ ರವರ ದೃಡೀಕೃತ ಚಾಲನ ಪರವಾನಿಗೆಯನ್ನು ನಿಪಿ.16 ಎಂದು, ರಾಜ್ ಕುಮಾರ್ ಎಸ್ ರವರಿಗೆ ಸಂಬಂದಪಟ್ಟ ಎರಡು ಗೋಲ್ಡ್ ಅಪ್ರೆಸೈಡ್ ರಿಪೋರ್ಟ್ ಗಳನ್ನು ನಿಪಿ.17 ಮತ್ತು 18 ಎಂದು, ಮಣಪುರಂ ಫೈನಾನ್ಸ್ ಲಿ. ಕಂಪನಿಯಲ್ಲಿ ಎರಡನೇ ಆರೋಪಿಯು ಚಾರ್ಜ್ ವಹಿಸಿಕೊಂಡಿರುವ ಬಗ್ಗೆ ಇರುವ ರಸೀದಿಯ ದೃಡೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.19 ಎಂದು, ದಿ.21.05.2010 ರಂದು ಒಂದನೇ ಆರೋಪಿಗೆ ವರ್ಗಾವಣೆಯಾಗಿರುವ ಬಗ್ಗೆ ಒಂದನೇ ಆರೋಪಿಗೆ ನೀಡಿರುವ ನೋಟಿಸ್ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.20 ಎಂದು, ದಿ.11.05.2020

ರಂದು ಎರಡನೇ ಆರೋಪಿಗೆ ವರ್ಗಾವಣೆಯಾಗಿರುವ ಬಗ್ಗೆ ಆದೇಶದ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.21 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ.ಎಸ್ ಆರ್. ಎರಡನೇ ಆರೋಪಿ ಪರ**

ಮಣಪುರಂ ಫೈನಾನ್ಸ್ ಲಿ. ರವರು ನೀಡಿರುವ ನಿಪಿ.2 ರಿಂದ 6 ಗಳಲ್ಲಿ ಎರಡನೇ ಆರೋಪಿಯ ಹೆಸರು ಇಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಎರಡನೇ ಆರೋಪಿ ಪಾತ್ರ ಯಾವುದು ಇಲ್ಲ ಒಂದನೇ ಆರೋಪಿ ಮಾತ್ರ ಈ ಪ್ರಕರಣಕ್ಕೆ ಸಂಬಂದಪಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣಕಕ್ಕೂ ಎರಡನೇ ಆರೋಪಿಗೆ ಯಾವುದೇ ಸಂಬಂದ ಇಲ್ಲದೇ ಇದ್ದರೂ ಸಹ ಎರಡನೇ ಆರೋಪಿಯ ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**